Form No.4 (Civil)
Deposition
Sheets
(R.P.No.57)

# ವಿಶೇಷ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ, ಯಾದಗಿರಿ

## ಸ್ಪೆಷಲ್.ಸಿ. ಸಂಖ್ಯೆಃ 37/2023

ಫ್ರಾ.ಸಾ. 3 ಚಾ.ಸಾ. 3

| | | |
|---|---|---|
| ಹೆಸರು | : | ಬಾಲಪ್ಪ |
| ತಂದೆಯ ಹೆಸರು | : | ಮರೆಪ್ಪ |
| ವಯಸ್ಸು | : | 44 ವರ್ಷ |
| ಉದ್ಯೋಗ | : | ಒಕ್ಕಲುತನ |
| ವಾಸ | : | ಬೂದಿನಾಳ |

ಪ್ರಮಾಣ ವಚನ ಭೋಧಿಸಿದ ದಿನಾಂಕಃ 05-08-2025
ಮುಖ್ಯ ವಿಚಾರಣೆ ವಿಶೇಷ ಸರಕಾರಿ ಅಭಿಯೋಜಕರಿಂದ

ಚಾಸಾ-2 ಶರಣಪ್ಪ ಮತ್ತು ಚಾಸಾ- 1 ಕಾಂತಮ್ಮ ಗೊತ್ತು.

2. ದಿಃ 02.03.2023 ರಂದು ಬೆಃ 8.00 ರಿಂದ 9.00 ರವರೆಗೆ ಪೋಲೀಸರು ನನ್ನನ್ನು ಚಾಸಾ- 1ರವರ ಹೊಲಕ್ಕೆ ಪಂಚನಾಗಿ ಕರೆದುಕೊಂಡು ಹೋಗಿದ್ದರು, ನನ್ನ ಸಮಕ್ಷಮ ಪಂಚನಾಮೆ ಮಾಡಿದರು. ಸದರಿ ಜಾಗವನ್ನು ಚಾಸಾ- 1 ಕಾಂತಮ್ಮ ತೋರಿಸಿದ್ದಾರೆ. ಸದರಿ ಪಂಚನಾಮೆಯನ್ನು ಜಗಳದ ಸಲುವಾಗಿ ಮಾಡಿದ್ದಾರೆ. ಸಾಕ್ಷಿಗೆ ಕಡತದಲ್ಲಿನ ನಿಪಿ-2 ಪಂಚನಾಮೆ ತೋರಿಸಲಾಗಿ ಅದರಲ್ಲಿರುವ ಸಹಿ ನೋಡಿ ಗುರುತಿಸಿದ್ದು ಸಾಕ್ಷಿಯ ಸಹಿಯನ್ನು ನಿ.ಪಿ.2(ಬಿ) ಎಂದು ಗುರುತಿಸಲಾಯಿತು. ನಿಪಿ-2 ನ್ನು ನಮಗೆ ಓದಿ ಹೇಳಿರುತ್ತಾರೆ. ಸಾಕ್ಷಿಗೆ ನಿಪಿ-3 ಭಾವಚಿತ್ರ ತೋರಿಸುತ್ತಿದ್ದು ಅದರಲ್ಲಿ ನಾನು ಕಾಣುತ್ತಿದ್ದು ಎಂದು ಹೇಳುತ್ತಾರೆ.

ಪಾಟೀ ಸವಾಲು ಆರೋಪಿತರ ಪರವಾಗಿ ಶ್ರೀ. ವಕೀಲರಿಂದ

3. ನಾನು 3 ನೇ ತರಗತಿ ವರೆಗೆ ಓದಿದ್ದೇನೆ. ಪೋಲೀಸರು ಬೆಃ 8.00 ಗಂಟೆಗೆ ಬಂದಿದ್ದಾರೆ ಆಗ ನಾನು ಮನೆಯಲ್ಲಿ ಇದ್ದೆ. ಪೋಲೀಸರು ನಮ್ಮ ಮನೆಯ ಮುಂದೆ ಹಾದು ಹೋಗುತ್ತಿದ್ದರು. ನಮ್ಮ ಮನೆ ನಮ್ಮ ಊರಿನ ಕೊನೆ ಮನೆ ಇರುತ್ತದೆ. ನಾನು ಬರುವ ಮುನ್ನ ವಾಹನದಲ್ಲಿ ಇಬ್ಬರು ಪೋಲೀಸರು ಮತ್ತು ಒಬ್ಬರು ಚಾಲಕ ಇದ್ದರು ಬೇರೆ ಯಾರು ಇರಲಿಲ್ಲ. ನಾನು ಒಬ್ಬನೇ ಅವರ ಜೊತೆ ಹೋಗಿದ್ದೇನೆ. ನಾನು ಹೊಲಕ್ಕೆ ಹೋಗುವ ಮುನ್ನ ಹನುಮಂತ

ಚಾಸಾ- 7 ಶರಣಪ್ಪ ಮತ್ತು ಚಾಸಾ- 1 ಕಾಂತಮ್ಮ ಇದ್ದರು. ನಮ್ಮ ಮನೆಯಿಂದ 15 ನಿಮಿಷಕ್ಕೆ ಸದರಿ ಹೊಲಕ್ಕೆ ಹೋದೆವು.

4. ಪೋಲೀಸರು ನಮ್ಮ ಮನೆಯ ಮುಂದೆ ಸುಮಾರು 3 ನಿಮಿಷಗಳ ಕಾಲ ನಿಂತಿದ್ದರು. ನಾವು ಸ್ಥಳಕ್ಕೆ ಹೋಗಿ ಮುಟ್ಟಲು ಸುಮಾರು 9.00 ಗಂಟೆ ಆಗಿರಬಹುದು ಎಂದರೆ ಸರಿ. ನಿಪಿ-2 ರಲ್ಲಿ ಏನು ಬರೆದಿದೆ ಎಂದು ನನಗೆ ತಿಳಿದಿಲ್ಲ. ಓದಲು ಬರೆಯಲು ಬರುವುದಿಲ್ಲ ಎಂದು ಸಾಕ್ಷಿ ನುಡಿಯುತ್ತಾರೆ.

5. ಚಾಸಾ- 4 ಹನುಮಂತ ನನ್ನ ಜೋತೆ ಬೇರಯವರಿಗಿಂತ ಅನ್ಯೂನ್ಯ ವಾಗಿದ್ದಾರೆ ಎಂದಂರೆ ಸರಿ. ನಿಪಿ- 3 ಭಾವ ಚಿತ್ರದಲ್ಲಿ ಹತ್ತಿ ಕಟ್ಟಿಗೆ ಕಾಣುವುದಿಲ್ಲ ಖಾಲಿ ಹೊಲ ಎಂದರೆ ಸರಿ. ಅಕ್ಕ ಪಕ್ಕ ಯಾವುದೇ ಬೆಳೆಗಳು ಇಲ್ಲಾ ಎಂದರೆ ಸರಿ. ನಾನು ಯಾವುದೇ ದಿನದಂದು ಘಟನಾ ಸ್ಥಳಕ್ಕೆ ಹೋಗಿ ಪಂಚನಾಮೆ ಮಾಡಿ ಸಹಿ ಮಾಡದಿದ್ದರೂ ಚಾಸಾ- 4 ಹನುಮಂತ ನನ್ನೊಂದಿಗೆ ಅನ್ಯೂನ್ಯವಾಗಿದ್ದು ಆತನಿಗೆ ಸಹಾಯ ಮಾಡಲು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ಸದರಿ ಹೊಲದಲ್ಲಿ ಯಾವುದೇ ಜಗಳ ನಡೆದಿಲ್ಲಾ ಎಂದರೆ ಸರಿಯಲ್ಲ. ಸದರಿ ಹೊಲದ ವಿಚಾರವಾಗಿ ಯಾವುದೇ ಘಟನೆ ನಡೆಯದಿದ್ದರೂ ಸೃಷ್ಟಿತ ಸಂಗತಿಗಳ ಮೂಲಕ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

<u>ಮರು ವಿಚಾರಣೆಃ-ಇಲ್ಲ</u>

(ನನ್ನ ಉಕ್ತ ಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಿದೆ)

ಓ.ಹೇ.ಕೆ.ಸ. ಇದೆ.

ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಯಾದಗಿರಿ.

Form No.4 (Civil)
Deposition
Sheets
(R.P.No.57)

# ವಿಶೇಷ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ, ಯಾದಗಿರಿ

## ಸ್ಪೆಷಲ್.ಸಿ. ಸಂಖ್ಯೆಃ 37/2023

ಫ್ರಾ.ಸಾ. 4 ಚಾ.ಸಾ. 5

| | | |
|---|---|---|
| ಹೆಸರು | : | ಶರಣಮ್ಮ |
| ಗಂಡನ ಹೆಸರು | : | ಶರಣಪ್ಪ |
| ವಯಸ್ಸು | : | 37 ವರ್ಷ |
| ಉದ್ಯೋಗ | : | ಮನೆಕೆಲಸ |
| ವಾಸ | : | ಬೂದನಾಳ |

ಪ್ರಮಾಣ ವಚನ ಭೋಧಿಸಿದ ದಿನಾಂಕಃ 05-08-2025
ಮುಖ್ಯ ವಿಚಾರಣೆ ವಿಶೇಷ ಸರಕಾರಿ ಅಭಿಯೋಜಕರಿಂದ

ಚಾಸಾ- 1 ಕಾಂತಮ್ಮ ಮತ್ತು 4 ಹನುಮಂತ ಗೊತ್ತು. ಅವರು ಮಾದಿಗ ಜಾತಿಗೇ ಸೇರಿದವರು ಇರುತ್ತಾರೆ. ಆರೋಪಿತರು ಪರಿಚಯ ಇದ್ದು ಅವರು ಕುರುಬ ಜನಾಂಗದವರು.

2. ಈಗ್ಗೆ 2 ವರ್ಷಗಳ ಹಿಂದೆ ಸೋಮವಾರದಂದು ಸುಮಾರು ಬೆಃ 10.00 ಗಂಟೆಗೆ ಚಾಸಾ- 1 ಮತ್ತು 4 ರವರಿಗೆ ಸೇರಿದ ಹೊಲದಲ್ಲಿ ಅವರು ಕಟ್ಟಿಗೆ ಆರಿಸುತ್ತಿರುವಾಗ, ಆಗ ನಾವು ಪಕ್ಕದ ಹೊಲದಲ್ಲಿ ಹತ್ತಿ ಬಿಡಿಸುತ್ತಿದ್ದೆವು, ಆಗ ಆರೋಪಿಗಳು ಹೊಲದ ವಿಚಾರವಾಗಿ ಬಂದು ಚಾಸಾ- 1 ಮತ್ತು 4 ರವರ ಜೊತೆಗೆ ಜಗಳ ಮಾಡಿ ಚಾಸಾ-1 ಕಾಂತಮ್ಮಳಿಗೆ ಸೂಳೆ ಮಾದಿಗ ಸೂಳೆ ಅಂತಾ ಬೈದಿರುತ್ತಾರೆ ಎಂದು ತಿಳಿಯಿತು. ಆರೋಪಿರು ಚಾಸಾ-1 ರವರಿಗೆ ಕೈಯಿಂದ ಹೊಡೆದಿರುತ್ತಾರೆ ಎಂದು ತಿಳಿಯಿತು. ಕೈಯಿಂದ ಚೂರಿದ್ದಾರೆ ಎಂದು ತಿಳಿಯಿತು. ಆರೋಪಿತರಿಗೆ ಚಾಸಾ-1 ಕಾಂತಮ್ಮ ಇವರು ಮಾದಿಗ ಜಾತಿಗೆ ಸೇರಿದವರು ಎಂದು ತಿಳಿದಿತ್ತು. ಆರೋಪಿತರು ಈಗ ನ್ಯಾಯಾಲಯದ ಮುಂದೆ ಇದ್ದಾರೆ ಎಂದದು ಗುರಿತಿಸುತ್ತಾರೆ. ಈ ಬಗ್ಗೆ ನಾನು ಪೋಲೀಸರ ಮುಂದೆ ನಾನು ನೋಡಿರುತ್ತೇನೇ ಎಂದು ಹೇಳಿಕೇ ನೀಡಿದ್ದೇನೆ.

ಪಾಟೀ ಸವಾಲು ಆರೋಪಿತರ ಪರವಾಗಿ ಶ್ರೀ. ಸಿ ಎಸ್ ಎಂ ವಕೀಲರಿಂದ

3. ನಾನು ಅನಕ್ಷರಸ್ತೆ. ನಮ್ಮ ಮನೆ ಮತ್ತು ಕಾಂತಮ್ಮನವ ರ ಮನೆ ಒಂದೇ ಏರಿಯಾದಲ್ಲಿ ಇವೆ ಎಂದರೆ ಸರಿ. ನಾನು ಮತ್ತು ಚಾಸಾ- 6 ಮಲ್ಲಮ್ಮ ಜೊತೆಯಲ್ಲಿ ಹೊಲಕ್ಕೆ ಬೆಃ 10.00 ಗಂಟೆಗೆ

ಹೋಗಿದ್ದೆವು. ಹತ್ತಿ ಬಿಡಿಸಲು ಹೊಲಕ್ಕೆ ಹೋಗಿದ್ದೆವು. ಹತ್ತಿ ಗಿಡಗಳು ದೊಡ್ಡ ಗಿಡಗಳಿದ್ದವು. ಹತ್ತಿ ಬಿಡಿಸಲು ಹೋದಾಗ ಹತ್ತಿ ಕಾಯಿ ಮತ್ತು ಕಡ್ಡಿಗಳು ತಗುಲಿ ಚೂರುತ್ತವೆ ಎಂದರೆ ಸರಿಯಲ್ಲ. ನಮ್ಮ ಇಬ್ಬರನ್ನು ಹೊರತುಪಡಿಸಿ ಬೇರೆ ಯಾರು ಹತ್ತಿ ಬಿಡಿಸಲು ಬಂದಿರಲಿಲ್ಲ. ನಮ್ಮ ಹೊಲ ಕಾಂತಮ್ಮನವರ ಹೊಲ 2 ಹೊಲ ಆದ ನಂತರ ಇತ್ತು. ನಿಪಿ-3 ಭಾವಚಿತ್ರದಲ್ಲಿ ಹತ್ತಿ ಹೊಲಗಳು ಕಾಣುತ್ತಿಲ್ಲ ಎಂದರೆ ಸರಿ.

4. ಸುಮಾರು ಅರ್ಧ ಚೀಲದಷ್ಟು ಹತ್ತಿ ಬಿಡಿಸಿದ್ದೆವು. ಚಾಸಾ-1 ಕಾಂತಮ್ಮ ತನ್ನ ಹೊಲದಲ್ಲಿ ನಾವು ಬರುವ ಮುನ್ನವೇ ಇದ್ದು ಕಟ್ಟಿಗೆ ಆರಿಸುತ್ತಿದ್ದಳು. ನಿಪಿ೩ ಭಾವ ಚಿತ್ರದಲ್ಲಿ ಯಾವುದೇ ಕಟ್ಟಿಗೆಗಳು ಇಲ್ಲಾ ಎಂದರೆ ಸರಿ. ಸ್ಥಳದ ಆಜು ಬಾಜು ಮಲ್ಲಮ್ಮನವರ ಹೊಲ ಇಲ್ಲಾ ಎಂದರೆ ಸರಿಯಲ್ಲ.

5. ಮಲ್ಲಮ್ಮ, ಕಾಂತಮ್ಮ, ಹನುಮಂತ ಮತ್ತು ನಾನು ಎಲ್ಲರೂ ಒಂದೇ ಸಮಾಜದವರು ಎಂದರೆ ಸರಿಯಲ್ಲ. ನಾನು ಹೊಲಕ್ಕೆ ಹೋಗದಿದ್ದರೂ ಯಾವುದೇ ಘಟನೆ ನೋಡಿ, ತಿಳಿಯದಿದ್ದರೂ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆಂದರೆ ಸರಿಯಲ್ಲ.

6. ಕಾಂತಮ್ಮಳ ಹೊಲದ ಪಕ್ಕ ಮಾಯಮ್ಮಳ ಹೊಲ ಇತ್ತು ಅದರಲ್ಲಿ ಯಾರು ಇರಲಿಲ್ಲ. ಯಾರು ಘಟನೆ ಸ್ಥಳದಲ್ಲಿ ಇರದಿದ್ದರೂ ನಾನು ಮತ್ತು ಕಾಂತಮ್ಮ ಅದನ್ನು ಸೃಷ್ಟಿಸಿರುತ್ತೇವೆ ಎಂದರೆ ಸರಿಯಲ್ಲ,

7. ಕಾಂತಮ್ಮ ಮದ್ಯಾಹ್ನ 2.00 ಗಂಟೆಗೆ ಹೋಗಿರುತ್ತಾರೆ. ಅವರು ಪೋಲೀಸ ಠಾಣೆಗೆ ಹೋಗಿ ಏಷ್ಟು ಹೊತ್ತು ಇದ್ದರು ಅಂತಾ ನನಗೆ ಗೊತ್ತಿಲ್ಲ. ಘಟನೆ ದಿನ ಸಂಜೆ ಕಾಂತಮ್ಮ ಮನೆಯಲ್ಲಿಯೇ ಇದ್ದರು.

8. 2 ದಿನಗಳ ನಂತರ ಪೋಲೀಸರು ಸಂಜೆ ಮನಗೆ ಬಂದಿದ್ದರು. ಕಾಂತಮ್ಮಳ ಗಂಡ ಹನುಮತಂ ಚಾಸಾ- 4 ಕೆಲಸ ಮಾಡುತ್ತಿದ್ದ ಹೊಲ ಊರ ಹತ್ತಿರ ಇದೆ. ನಾವು ಸ್ಥಳಕ್ಕೆ ಹೋಗುವ ಹೊತ್ತಿಗೆ ಚಾಸಾ-4 ಹನಮಂತ ಬಂದಿದ್ದ. ಘಟನೆ ಸಮಯದಲ್ಲಿ ಮೊಬೈಲನಲ್ಲಿ ನಾವು ದೃಶ್ಯಾವಳಿ ತೆಗೆದಿಲ್ಲ. ನಾನು ಯಾರಿಗೂ ಕರೆ ಮಾಡಿ ಕರೆದಿಲ್ಲ. ಘಟನೆಯ ಸಮಯದಲ್ಲಿ ಹೊಲದಲ್ಲಿ ಯಾವುದೇ ಬೆಳೆ ಇರಲಿಲ್ಲ ಯಾವುದೇ ಘಟನೆ ನಡೆದಿಲ್ಲವಾದರೂ ನಾನು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ಆರೋಪಿತರು ಚಾಸಾ- 1 ಮತ್ತು 4 ರವರಿಗೆ ಜಾತಿ ಹಿಡಿದು ಅವಾಚ್ಯ ಶಬ್ದದಿಂದ ನಿಂದಿಸಿದರು ಎಂದು ಸುಳ್ಳು ಹೇಳುತಿದ್ದೇನೆಂದರೆ ಸರಿಯಲ್ಲ,

<u>ಮರು ವಿಚಾರಣೆಃ-ಇಲ್ಲ</u>

(ನನ್ನ ಉಕ್ತ ಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಿದೆ)

ಓ.ಹೇ.ಕೆ.ಸ. ಇದೆ.
ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಯಾದಗಿರಿ.